# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 246 |
| ಸದಸ್ಯರ ಹೆಸರು | : | ಶ್ರೀ. ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28-01-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇದುವರೆಗೆ ಎಷ್ಟು ರಸ್ತೆಗಳನ್ನು ರಾಜ್ಯ ಹೆದ್ದಾರಿಗಳಾಗಿ (State Highways) ಉನ್ನತೀಕರಿಸಲಾಗಿದೆ; ಈ ರೀತಿಯ ಉನ್ನತೀಕರಣಕ್ಕೆ ಅನುಸರಿಸಲಾದ (criteria) ಮಾನದಂಡಗಳಾವುವು ಉನ್ನತೀಕರಿಸಲಾದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲಾಗಿದೆಯೇ; ಅಭಿವೃದ್ಧಿ ಪಡಿಸಿರದಿದ್ದಲ್ಲಿ, ಅದಕ್ಕೆ ಕಾರಣಗಳೇನು; | ರಾಜ್ಯದಲ್ಲಿ 2020 ಇಸವಿಯಿಂದ ಇಲ್ಲಿಯವರೆಗೆ 230 ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ಉನ್ನತೀಕರಣಕ್ಕೆ ಅನುಸರಿಸಲಾದ (criteria) ಮಾನದಂಡಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.<br><br>ಉನ್ನತೀಕರಿಸಲಾದ ರಾಜ್ಯ ಹೆದ್ದಾರಿಗಳನ್ನು ಅನುದಾನ ಲಭ್ಯತೆಯನುಸಾರ ಅಭಿವೃದ್ಧಿಪಡಿಸಲಾಗುತ್ತಿದೆ. |
| ಆ | ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯು (PWD) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ದೊಂದಿಗೆ ಯಾವ ರೀತಿಯಲ್ಲಿ ಸಮನ್ವಯ ಸಾಧಿಸುತ್ತಿದೆ; ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಸಂದರ್ಭದಲ್ಲಿ ರಾಜ್ಯದ ಭೌಗೋಳಿಕ, ಸಾಮಾಜಿಕ ಹಾಗೂ ನಗರ/ಗ್ರಾಮೀಣ ಪರಿಸ್ಥಿತಿಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಗಮನಕ್ಕೆ ತರಲಾಗಿದೆಯೇ; | ರಾಜ್ಯದ ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ವಿವಿಧ ಅನುಮತಿಗಳನ್ನು ಪಡೆಯಲು, ಯೋಜನೆಗಳನ್ನು ತ್ವರಿತಗೊಳಿಸಲು ನಿಯಮಿತವಾಗಿ ವಿವಿಧ ಹಂತಗಳಲ್ಲಿ ಲೋಕೋಪಯೋಗಿ ಸಚಿವರು, ಮುಖ್ಯ ಕಾರ್ಯದರ್ಶಿಯವರ ಹಾಗೂ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಹಂತದಲ್ಲಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ, ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗುತ್ತಿದೆ.<br><br>ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ರಾಜ್ಯ ಸರ್ಕಾರವು NHAIಗೆ ಅಗತ್ಯವಿರುವ ಸಹಕಾರವನ್ನು ಒದಗಿಸುವ ಮೂಲಕ ಯೋಜನಾ ವಿನ್ಯಾಸಕ್ಕೆ ಸಹಕಾರಿಯಾಗಿರುತ್ತದೆ. |
| ಇ | ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುವ ನಗರ ಪ್ರದೇಶಗಳು, ಜನವಸತಿ ಪ್ರದೇಶಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಗ್ರಾಮ ಪಂಚಾಯತ್ ರಸ್ತೆಗಳು ಇರುವ ಸ್ಥಳಗಳಲ್ಲಿ ಮೇಲ್ಸೇತುವೆ (Flyover), ಅಂಡರ್‌ಪಾಸ್, ಪಾದಚಾರಿ ಕ್ರಾಸಿಂಗ್, ಸರ್ವೀಸ್ ರಸ್ತೆ ಮತ್ತು ಇತರೆ ರಸ್ತೆ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಜಾರಿಗೆ ತರುವ ಕುರಿತು ಕ್ರಮ ಕೈಗೊಳ್ಳಲಾಗಿದೆಯೇ: | ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಡಿಪಿಆರ್ ಸಮಯದಲ್ಲಿ ಫ್ಲೈಓವರ್‌ಗಳು, ಅಂಡರ್‌ಪಾಸ್‌ಗಳು, ಪಾದಚಾರಿ ಕ್ರಾಸಿಂಗ್ ಗಳು, ಸರ್ವಿಸ್ ರಸ್ತೆಗಳು ಮತ್ತು ಇತರ ರಸ್ತೆ ಸುರಕ್ಷತಾ ಕ್ರಮಗಳನ್ನು ಪರಿಗಣಿಸಲಾಗುತ್ತದೆ. IRC/MoRTH ಮಾನದಂಡಗಳಿಗೆ ಅನುಗುಣವಾಗಿ ತಾಂತ್ರಿಕ ವಿನ್ಯಾಸ ಮತ್ತು ಸೈಟ್-ನಿರ್ದಿಷ್ಟ ಅವಶ್ಯಕತೆಗಳ ಆಧಾರದ ಮೇಲೆ ಸುರಕ್ಷತಾ ಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತದೆ |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಈ | ಸಾರ್ವಜನಿಕರ ಪ್ರತಿಭಟನೆಯ ನಂತರ ಮಾತ್ರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ವೇಳೆ ಅಂಡರ್‌ಪಾಸ್, ಮೇಲ್ಸೇತುವೆ, ಕ್ರಾಸಿಂಗ್ ಹಾಗೂ ಸರ್ವಿಸ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದ್ದು ಈ ಅಗತ್ಯಗಳನ್ನು ಯೋಜನೆ ರೂಪಿಸುವ ಹಂತದಲ್ಲೇ ಗುರುತಿಸಿ, ಅನಗತ್ಯ ಗೊಂದಲಗಳು ಹಾಗೂ ಹೆಚ್ಚುವರಿ ವೆಚ್ಚಗಳನ್ನು ತಪ್ಪಿಸಬಹುದಲ್ಲವೇ; ಲೋಕೋಪಯೋಗಿ ಇಲಾಖೆಯು ಈ ಕುರಿತು ಹೆದ್ದಾರಿ ಇಲಾಖೆಗೆ ಸಲಹೆ ನೀಡುತ್ತಿದೆಯೇ; | ಅಂಡರ್‌ಪಾಸ್‌ಗಳು, ಫ್ಲೈಓವರ್‌ಗಳು, ಪಾದಚಾರಿಗಳ ದಾಟಣೆಗಳು ಮತ್ತು ಸರ್ವಿಸ್ ರಸ್ತೆಗಳ ಅಗತ್ಯವನ್ನು ಸಂಚಾರ ಅಧ್ಯಯನಗಳು, ರಸ್ತೆ ಸುರಕ್ಷತಾ ಪರಿಶೀಲನೆಗಳು ಹಾಗೂ ಸ್ಥಳಾನುಸಾರ ಪರಿಸ್ಥಿತಿಗಳ ಆಧಾರದ ಮೇಲೆ ಯೋಜನೆ ಮತ್ತು ಡಿಪಿಆರ್ ಹಂತದಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಹೆಚ್ಚುವರಿ ಅಗತ್ಯಗಳು ನಂತರದಲ್ಲಿ ಉದ್ಭವಿಸಿದಲ್ಲಿ, ಅವುಗಳನ್ನು ಸಂಬಂಧಿತ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಪರಿಶೀಲಿಸಲಾಗುತ್ತದೆ ಮತ್ತು ಸಾಧ್ಯತೆ ಹಾಗೂ ಸ್ಥಳಾನುಸಾರ ಅಗತ್ಯಗಳ ಆಧಾರದ ಮೇಲೆ ಒದಗಿಸಲಾಗುತ್ತದೆ. |
| ಉ | ಈ ಕುರಿತು ರಾಜ್ಯದ ಲೋಕೋಪಯೋಗಿ ಇಲಾಖೆ ಯಾವುದೇ ಪೂರ್ವಯೋಜನೆ ಅಥವಾ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಚಿಂತನೆ ನಡೆಸಿದೆಯೇ; (ವಿವರ ನೀಡುವುದು) | ಈ ಬಗ್ಗೆ IRC/ಭಾರತ ಸರ್ಕಾರದ ಭೂ-ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳ ಅನುಪಾಲನೆ ಮಾಡಲಾಗುತ್ತಿದೆ. |

ಸಂಖ್ಯೆ: ಲೋಇ 59 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು